132(4)

SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 54] ಸೋಮವಾರ 2—12—45 [ಬಿಡಿ ಪ್ರತಿ 6 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಅಶಾಂತಿ ಹೆಚ್ಚು. ವ್ಯಸನ ಹಾರದಲ್ಲಿ ತೊಂದರೆಗಳಿವೆ. ಕ್ಲೇಶಗಳ ತಾಪವೂ ಪೀಡಿಸುತ್ತಿರುತ್ತದೆ.

ವೃಷಭ— ಆರೋಗ್ಯ ಆರ್ಥಿಕ ಲಾಭಗಳಿವೆ. ಸಖಿಸಂತೋಷಗಳುಂಟು

ಮಿಥುನ—ಆದಾಯಕ್ಕಿಂತ ವ್ಯಯ ಹೆಚ್ಚು. ಶರೀರ ಸ್ಥಿತಿಯು ಉತ್ತಮವಾಗಿರುತ್ತದೆ. ವ್ಯವಹಾರದಲ್ಲಿ ಆಕಂಕಗಳು ಒದಗುವ ಸೂಚನೆಯಿದೆ.

ಕರ್ಕಾಟಕ— ಶಾರೀರಕ ಸ್ಥಿತಿಯು ಉತ್ತಮವಾಗಿರುವುದಿಲ್ಲ ವ್ಯವಹಾರದಲ್ಲಿ ಕಷ್ಟ ಪ್ರಾಪ್ತಿ.

ಸಿಂಹ— ಮನೋದೌರ್ಬಲ್ಯದ ಸೂಚನೆ ಇದೆ. ಆರೋಗ್ಯ ಲಾಭವುಂಟು. ವ್ಯವಹಾರದಲ್ಲಿ ವಿಘ್ನಗಳು ಪ್ರಾಪ್ತವಾಗುವುವು.

ಕನ್ಯ— ವ್ಯವಹಾರದಲ್ಲಿ ಲಾಭವೂ ಕೀರ್ತಿಯೂ ಲಭಿಸುವುದು. ಆದಾಯ ಹೆಚ್ಚಾಗಿರುತ್ತದೆ.

ತುಲ— ವ್ಯವಹಾರದಲ್ಲಿ ಜಯ ಪ್ರಾಪ್ತಿ. ಮನಸ್ಸು ಆನಂದದಿಂದ ಕೂಡಿರುತ್ತದೆ.

ವೃಶ್ಚಿಕ — ಆರೋಗ್ಯವು ಚನ್ನಾಗಿರುತ್ತದೆ. ಆರ್ಥಿಕ ಲಾಭವುಂಟು. ಮಾನಸಿಕ ಸ್ಥಿತಿ ಉತ್ತಮವಿದೆ.

ಧನಸ್ಸು — ಆರೋಗ್ಯಕ್ಕೆ ಹಾನಿ ಪ್ರಾಪ್ತಿ. ವ್ಯವಹಾರದಲ್ಲಿ ಕಷ್ಟ. ಶತೃಗಳಿಂದ ತೊಂದರೆ

ಮಕರ — ಆರೋಗ್ಯವು ಚನ್ನಾಗಿರುವುದಿಲ್ಲ. ಮನಸ್ಸು ವ್ಯಸನಪೂರಿತವಾಗಿರುತ್ತದೆ. ವ್ಯವಹಾರದಲ್ಲಿ ತೊಂದರೆಗಳ ಭಯವಿದೆ.

ಕುಂಭ — ಶಾರೀರಕ, ಮಾನಸಿಕ ಆರ್ಥಿಕ ಸ್ಥಿತಿಗಳುತ್ತಮವಿರುತ್ತವೆ.

ಮೀನ — ಆರೋಗ್ಯ ಚನ್ನಾಗಿರುತ್ತ. ವ್ಯವಹಾರದಲ್ಲಿ ಶ್ರಮಕಾಣ ಬರುವುದು. ಖರ್ಚು ಹೆಚ್ಚು.

.....

ಡ್ರಾ ಆಯಿತು

ಮೈಸೂರು, ಡಿ 2 — ನಿನ್ನೆ ಯ ದಿವಸ ಸಂಜೆ ಮೈಸೂರು ಆರ್ಮಿಸ್ಟಿಗೂ, ಬೆಂಗಳೂರು ಮುಸ್ಲಿಂಸಿಗೂ ನಡೆದ ಫುಟ್‌ಬಾಲ್ ಮ್ಯಾಚ್ ಡ್ರಾ ಆಯಿತು.

ಗಾಂಧೀ – ಕೇಸಿ ಭೇಟಿ

ಈಜಿಪ್ಟಿನಲ್ಲಿ ಕಂಡಿತದ ಪ್ರಭಾನ ಪ್ರಸಂಗಕ್ಕೆ ಬ್ರಿಟನ್ನೇ ಕಾರಣವೆಂದೂ, ಇದರಿಂದಲೇ ಈಜಿಪ್ಟಿನಲ್ಲಿ ವಿವಾಹ ವಿಚ್ಛೇದನ ಮತ್ತು ತಕ್ಸೀರುಗಳು ಹೆಚ್ಚಲು ಕಾರಣವೆಂದೂ ಈಜಿಪ್ಟಿನ ಮದ್ಯಪಾನ ನಿರೋಧ ಸಂಘದವರು ಹೇಳಿರುತ್ತಾರೆ ಅಲ್ಲದೆ 1882 ರಲ್ಲಿ ಬ್ರಿಟಿಷ್ ಆಕ್ರಮಣದ ಮುಂಚೆ ಈಜಿಪ್ಟಿನಲ್ಲಿ ಸಾರಾಯಿ ವಗೈರೆ ಮಾದಕ ಪಾನೀಯ ಅಂಗಡಿಗಳೇ ಇರಲಿಲ್ಲವೆಂದೂ, ಈಗ 4000 ವಿವೆ ಆಯಿಂದೂ ಹೇಳಿದಾರೆ.

ಂ ಂ

ಕಾತಿ ನ 30— ಒಬ್ಬ ಪೋಲೀಸು ಜವಾನನು ಸುಳ್ಳು ಮೊಖದ್ದಮೆಯನ್ನು ಹೂಡಿಸ್ಕ್ಕಾಗಿ 3 ವರ್ಷ ಕಠಿಣ ಸಜವಧಿಸಲಾಯಿತು.

ಂ ಂ

ಕಲ್ಕತ್ತೆ, ಡಿ 1 — ಗಾಂಧೀಜೀ ಈ ದಿವಸ 1 ಘಂಟೆಗೆ ಕಲ್ಕತ್ತೆಗೆ ತಲುಪಿದರು. ತಲುಪಿದ 5 ಘಂಟೆಗಳೊಳಗಾಗಿ ಗೌರ್ನರ್ ಕೇಸಿಯ ವರನ್ನು ಭೇಟ ಮಾಡಿದರು. ಮಾತುಕತೆಗಳು ನಡೆದವು.

ಂ ಂ

ಚುಂಕಿಂಗ್, ಡಿ 1 — ರಷ್ಯಾ ಮತ್ತು ಚೈನಾಗಳಿಗಾದ ಒಪ್ಪಂದದ ಪ್ರಕಾರ ರಷ್ಯಾ ಮಂಚೂರಿಯಾದಿಂದ ಜನವರಿ 3 ರೊಳಗೆ ತನ್ನ ಸೈನ್ಯವನ್ನು ವಾಪಸು ಕರೆಸಿಕೊಳ್ಳುವುದು.

ಂ ಂ

ಕೈರೋ, ಡಿ 1 — ಕೈರೋ ಹತ್ತಿರ ಒಂದು ಬ್ರಿಟಿಷ್ ಅವಘಡ ನಡೆದು 7 ಮಂದಿ ಮಡಿದರೆಂದೂ ಕೆಲವರು ಗಾಯಗೊಂಡರೆಂದೂ ತಿಳಿಯಬಂದಿದೆ.

ಂ ಂ

ಕೈರೋ, ಡಿ 1 — ಇಲ್ಲಿಂದ ಬ್ರಿಟಿಷ್ ಸೈನ್ಯ ವಾಪಸಾಗಬೇಕೆಂದು ಇಲ್ಲಿಯವರ ಕೇಳಿಕೆಯಾಗಿದೆ.

ಸೈಗಾನ್, ನ 30 — ಲಾರ್ಡ್ ಮೌಂಟ್‌ಬ್ಯಾಟನ್ನರು ಸಾಗನಿಗೆ ಬಂದು ಫ್ರೆಂಚ್ ಪ್ರತಿನಿಧಿಗಳೊಡನೆ ಅನಿಕಾಮ ಒದಲಾವಣೆ ವಿಷಯ ಚರ್ಚಿಸುತ್ತಿರುವರು

ಕಲ್ಕತ್ತಾ, ಡಿ 2 — ನಿನ್ನೆ ದಿವಸ ಗಾಂಧೀಜೀ ಮೋಟಾರೂ ಒಂದೂ ಮಿಲಿಟರಿ ಕಾರು ಡ್ರೈವರಿನ ವಿಚಕ್ಷಣೆಯಿಂದ ಅಪಘಾತ ತಪ್ಪಿತು.

ಲಂಡನ್, ಡಿ 1 — ಮರಣ ದಂಡನೆ ವಿಧಿಸಲ್ಪಟ್ಟೀರವ ಜಾರ್ಜ್ ಎಮರಿಯನ್ನು ತಾ || 19 ರಲ್ಲಿ ಗಲ್ಲಿಗೇರಿಸಲು ತಾತ್ಕಾಲಿಕವಾಗಿ ನಿಶ್ಚಯಿಸಲಾಗಿದೆ.

ಬೆಲ್ಗ್ರೇಡ್ ಡಿ 1 — ಯುಗೋಸ್ಲೋವಿಯಾ ಪ್ರಜಾಪ್ರಭುತ್ವಕ್ಕೆ ಡಾ|| ಇವಾನ್‌ಹೈರಾರವರು ಸರ್ವಾನುಮತದಿಂದ ಚುನಾಯಿಸಲ್ಪಟ್ಟರು.

ಪೆಷಾವರ ಡಿ 1 — ಗಡಿನಾಡಿನ ಅಕಾಲಿಗಳು ಕಾಂಗ್ರೆಸಿಗೆ ತಮ್ಮ ಮತಗಳನ್ನು ಕೊಡಲು ನಿರ್ಧರಿಸಿರುವರು.

ಅಲಹಾಬಾದ್ ನ 29— 'ಡಾರ್ ' ಪತ್ರಿಕೆಯು ಅಲಹಾಬಾದು ವಿಶ್ವವಿದ್ಯಾನಿಲಯದ ಲೈಬ್ರರಿಗೆ ಬಟ್ಟೆಕೂಟ್ಟರೂ ಬೇಡವಂತೆ! ಅದರ ಕೋಮುವಾರು ಭಾವನೆಯೇ ಇದಕ್ಕೆ ಕಾರಣವಂತೆ!

ಕಿಡಲೂರು ನ 30— ಐ; ಎಚ್. ಎ. ದಿನಾಚರಣೆ ಸಂಬಂಧದಲ್ಲಿ ವಿದ್ಯಾರ್ಥಿಗಳ ಮೆರವಣಿಗೆಯು ಅತಿರಿ ಛಾರ್ಜಿನಿಂದ ಚದುರಿಸಲ್ಪಟ್ಟಿತು.

ಸ್ಮಿತ್, ನ 30 — ಟಿರಲ ಜಾಕಬ ಎಂಬುವನು ಅನೆಯು ತನ್ನನ್ನು ಅಟ್ಟಿಕೊಂಡು ಬಂದು ಕೆಡವಿ ಗಾಯಗೊಳಿಸಿತೆಂದು ಮಿಸೆಸ್ ಗ್ರೇಕ್ ಕೇಪರ ಎಂಬುವಳ ಮೇಲೆ 5000 ಡಾಲರ ಪರಿಹಾರ ಕೊಡಬೇಕೆಂಬ ವ್ಯಾಜ್ಯದಲ್ಲಿ 100 ಡಾಲರ ಕೊಡಲು ತೀರ್ಮಾನವಾಯ್ತು

ವಿವಿಧ ವೃತ್ತ

ಲಾಹೋರು ನ 28— ಫಜರ್ಪುರ ಜೈಲಿನಿಂದ 21 ಮಂದಿ ಐ. ಎನ್. ಎ. ಜನರು ಬಿಡಲ್ಪಟ್ಟಿರುವರು. ಇವರು ಪ್ರಾಂತಿಕ ಕಾಂಗ್ರೆಸ್ ಕಛೇರಿಗೆ ಬಂದು ತಾವು ಕಾಂಗ್ರೆಸ್ ಕೆಲಸಕ್ಕೆ ಸಿದ್ಧರಿರುವೆವೆಂದು ತಿಳಿಸಿದರು.

ಕಲ್ಕತ್ತಾ ಡಿ 1 — ಸದ್ಯದಲ್ಲೇ ಗಾಂಧಿಜಿ ಮತ್ತು ವೇವೆಲ್ಲರ ಭೇಟಿ ನಡೆಯುವ ನಿರೀಕ್ಷಣೆಯಿದೆ.

ನ್ಯೂಯಾರ್ಕ್ ಡಿ 1— ಸಂಯುಕ್ತ ಅಮೇರಿಕಾದ ಕಾರ್ಮಿಕ ಸಮಸ್ಯೆ ನೋಡಿದರೆ ಮುಂದಿನ ವರ್ಷ 7 ಮಿಲಿಯ ಮಂದಿ ಕೆಲಸವಿಲ್ಲದವರಾಗುವರಂತೆ!

ಸೌದಿ ಅರೇಬಿಯಾ ರಾಜರಾದ ಇಬನ್ ಸೌದರು ಮುಂದಿನ ವಸಂತ ಋತುವಿನಲ್ಲಿ ಭಾರತಕ್ಕೆ ಭೇಟಿಕೊಡಲಿರುವರು.

ಬೆಂಗಳೂರು ನ 29— ಪೇಪರ್ ಕಂಟ್ರೋಲು ಆರ್ಡರಿನಲ್ಲಿ ಸ್ವಲ್ಪ ಹೆಚ್ಚು ಕಾಗದ ಉಪಯೋಗಿಸಿಕೊಳ್ಳುವಂತೆ ತಿದ್ದುಪಡಿನೂಡಿದೆ.

ಕಲ್ಕತ್ತಾ ಡಿ 1— ಈ ದಿನದ ಕುದುರೆ ಜೂಜಿನಲ್ಲಿ ಟ್ರಿಬಲ್ ಟೋಟಿನ 33 ಟಿಕೇಟುಗಳಿಗೆ ತಲಾ ರೂ. 1443 ದೊರೆತಿವೆ.

ಮದರಾಸು ಡಿ 1— ಇಲ್ಲಿಯ ಕುದುರೆ ಜೂಜಿನ ಟ್ರಿಬಲ್ ಸೋಟಿನಲ್ಲಿ ಟಿಕೇಟಿಗೆ 1301 ರೂ. ದೊರೆತಿದೆ.

ಮದರಾಸು ನ 50— ಲುಂಗೀ ವ್ಯಾಪಾರಿ ಆರ್. ಕೆ. ಪಿಳ್ಳೆ ಮತ್ತು ಮುತ್ತದ್ದಿ ಜಯರಾಂ ನಾಯ್ಡುರವರು ಫ್ರೊವಿನ್ಸಿಯಲ್ ಟೆಕ್ಸ್‌ಟೈಲ್ ಕಂಟ್ರೋಲರವರಿಗೆ 1000 ರೂ. ಲಂಚಕೊಟ್ಟು, ಲುಂಗಿಗಳನ್ನು ಹೊಶಗೆ ಕಳುಹಿಸಲು ರಹದಾರಿ ಹೊಂದಲು ಪ್ರಯತ್ನಿಸಿದರೆಂದೂ, ಆ ರೀತಿ ಲಂಚ ಕೊಡಲು ಹೊದ ಅಪರಾಧಕ್ಕಾಗಿ ಅವರ ಮೇಲೆ ಪೋಲೀಸಿನವರು ಸೊಖದ್ದಮೆ ಹೂಡಿದಾರೆ.

ವಿನೋದ

ಆಫ್ರಿಕಾದ ಒಬ್ಬ ರೈಲು ರೋಡು ಏಜೆಂಟನು ಕೇಂದ್ರ ಕಛೇರಿಯಿಂದ ಅಜ್ಞೆ ಪಡೆದುಕೊಳ್ಳದೇ ಕೆಲಸ ನಡೆಸುತ್ತಿದ್ದುದಕ್ಕಾಗಿ ಬೈಯಿಸಿಕೊಳ್ಳಲ್ಪಟ್ಟನು. ನಂತರ ಒಂದು ದಿನ ಅತನು ಕೇಂದ್ರ ಕಚೇರಿಗೆ ಈ ರೀತಿ ತಂತಿ ವಾರ್ತೆ ಕಳಿಸಿದನು— 'ಪ್ಲಾಟ್‌ಫಾರಂನಲ್ಲಿ ಒಂದು ಹುಲಿಯು ಕಂಡಕ್ಟರನ್ನು ತಿಟ್ಟುತ್ತಿದೆ, ನಿನು ಮಾಡಬೇಕಾದ್ದೇನು, ತಂತೀ ಮೂಲಕ ತಿಳಿಸಿ'.

ಪಾಕಿಸ್ಥಾನಕೊಂದು ಅಪಶಕುನವೆ

ಉತ್ತರ ಮಲಬಾರಿನ ತಲಿಪರಾಂಬ್ಬ ಎಂಬಲ್ಲಿ ಸ್ಥಳೀಯ ಮುಸ್ಲಿಂ ಲೀಗಿನವರು ಅಲ್ಲಿಗೆ ಬಂದಿಸ್ಸ ಜಿಲ್ಲಾ ಲೀಗು ಮುಡರಿಗೆ ಸ್ವಾಗತ ಸತ್ಕಾರವನ್ನೇರ್ಪಡಿಸಿದಾಗ ಒಂದು ದುರಂತ ಘಟನೆ ಸಂಭವಿತು. ಅಂದವಾಗಿ ಅಂಬಾರಿಹಾಕಿ ಅಲಂಕೃತವಾಗಿದ್ದ ಆನೆಯೊಂದಿಗೆ ವಾದ್ಯ ಸಮೇತ ಮೆರವಣಿಗೆ ಹೊರಟಿತ್ತಿದ್ದಾಗ ಆನೆಗೆ ಬುದ್ಧಿ ಸ್ತಿಮಿತ ತಪ್ಪಿ ಜದು ತನ ಮಾವಟಿಗನನ್ನೇ ಕೊಂದಿತು. ಆ ರೀತಿ ವಾದ್ಯ ಮಾಡುವುದು (ಪ್ರ ಕೂ ತು ನಾದ) ತ್ರಿಚೆಂಬೂರಿನ ದೇವಸ್ಥಾನದ ಹೆಸರನ್ನೊಂದಿಗೆ ಬೆಳೆತವಾಗಿದೆ. ಆ ರೀತಿ ಅಂಬಾರಿಯುಕ್ತ ತೆಗದುಕೊಂಡು ಹೋಗುವುದು ಪವಿತ್ರವಾದುದಲ್ಲವೆಂಬ ನಂಬಿಕೆಯೂ ಹಿಂದೂಗಳಲ್ಲಿದೆ (ಪ್ರ)

ಇನ್ನು 6 ತಿಂಗಳಲ್ಲಿ ಕಾಗದದ ಹ ತೋಟಿ ಬಣ್ಣ ರದ್ದಾಗುವುದೆಂದು ಹೇಳಲಾಗಿದೆ.

ಸನಗೆ ಕಾಂಗ್ರೆಸ್ ಅಂದರೆ ಪ್ರಾಣ. ಆದರಿಂದಲೇ ಕಾಂಗ್ರೆಸ್ಸಿಗೆ ಸೇರುತ್ತಿದ್ದೇನೆ ಎಂದು ಹೇಳಿ ಹಿಂದೂಮಹಾಸಭೆಯ ಕಾರ್ಯಕಾರಿ ಮಂಡಲಿಯ ಸದಸ ರಾದ ಶ್ರೀ ರಾಮಪ್ರಸಾದರು ಹಿಂದೂಮಹಾಸಭೆ ಬಿಟ್ಟು ಕಾಂಗ್ರೆಸ್ಸಿಗೆ ಸೇರಿದರು.

ಫ್ರಾನ್ಸಿನ ಮಾರ್ಷಲ್ ಪೀಟನರ ಬಿಡುಗಡೆಯಾಗಲೇಬೇಕೆಂದು ಆಂಗ್ಲೋ ಅಮೆರಿಕ ಹಿತಗಳ ಒತ್ತಾಸೆಯು ಜನರಲ್ ಡಿಗಾಲರ ಮೇಲೆ ಬಲವಾಗಿದೆ ಎಂದು ಫ್ರೆಂಚ್ ರಾಜಕೀಯದಲ್ಲಿನ ವರ್ತಮಾನವಾಗಿದೆ.

ಚಲನಚಿತ್ರ ತಾರೆ ನೀನಾಳ ಮೊದಲನೆ ಗಂಡನನ್ನು ವಾರ್ನರ್ ಚಲನಚಿತ್ರ ತಾರೆ ವಿಜಯಾಳು ಮದುವೆಮಾಡಿಕೊಂಡಳು.

ಅಣು ಬಾಂಬಿನ ವಿಷಯದ ಚಿತ್ರವೊಂದು ಅಮೆರಿಕಾದಲ್ಲಿ ತಯಾರಾಗಿರುವುದೆಂದು ಹೇಳಲಾಗಿದೆ.

ಪ್ರಮುಖ ನಾಜೀ ಯುದ್ಧಪಾತಕಿಗಳ ವಿಚಾರಣೆ ಕುರಿತಾದ ಚಿತ್ರವನ್ನು ತಯಾರಿಸುವ ಏರ್ಪಾಡು ನಡೆಯುತ್ತಿದೆ

ಲಂಡನ್ ನ 25 — ಒಂದು ಲಕ್ಷ ಪೌಂಡುಗಳಿಗೆ ಡರ್ಬಿ ಜೂಬಿನಲ್ಲಿ ಗೆದ್ದ ಡಾಂಟಿಯೆಂಬ ಕುದುರೆಯನ್ನು ವಿಮೆ ಮಾಡಲಾಗಿದೆ.

ಕಲ್ಕತ್ತ ನ 25 — ಬಂಗಾಳದ ಏ ಆರ್ ಎ ನಿಧಿಗೆ ರೂ 5 00 ಕ್ಕೆ ಮೇಲ್ಪಟ್ಟು ಶೇಖರಿಸಲಾಗಿದೆ

ಕಳೆದವಾರ

ನ್ಯೂಡೆಲ್ಲಿ, ನ 27 — ವೈಸ್ರಾಯಿ ಸಚಿವ ಮಂಡಲದ ಮಾಜೀ ರಕ್ಷಣಾ ಸಚಿವರಾದ ಸರ್ ಫಿರೋಜ್ ಖಾನ್ ನೂನರು ಅಸೋಸಿಯೇಟೆಡ್ ಪ್ರಾತರ್ ಪ್ರತಿನಿಧಿಗೆ ಕೊಟ್ಟ ಭೇಟಿಯಲ್ಲಿ " ಆಜಾದ್ ಹಿಂದ್ ಫೌಜಿನ ವಿಚಾರಣೆ ನಿಂತುಹೋಗಬೇಕೆಂದೂ ಮತ್ತು ಸ್ವಜನರ ವಿಷಯದಲ್ಲಿ ನಿರಪರಾಧಿಗಳಾದವರ ವಿಷಯದಲ್ಲಿ ಸಾರ್ವಭೌಮರು ದಯಾಬಿಕ್ಷೆಯನ್ನು ನೀಡಬೇಕು " ಎಂಬುದಾಗಿ ತಿಳಿಯಪಡಿಸಿದರು.

ಬೊಂಬಾಯಿ, ನ 28 — 1400 ಮಂದಿ ಬರ್ಮಾಷೆಲ್ ಎಣ್ಣೆ ಸಂಸೆಯ ಕೆಲಸಗಾರರಲ್ಲಿ 900 ಮಂದಿ ಕೆಲಸಗಾರರು, ತಮಗೆ ವಿಜಯದ ಬೋನಸ್ಸನ್ನು ದಯಪಾಲಿಸಲಿಲ್ಲವೆಂದು ಸ್ಥಾನಮುಷ್ಕರವನ್ನು ಹಿಡಿದಿರುವರು. ಈ ಬಗ್ಗೆ ನ್ಯಾಯ ಕೊಡುವ ಸಲುವಾಗಿ ಬೊಂಬಾಯಿ ಸರ್ಕಾರವು ಬಾಂಬೆ ಹೈ ಕೋರ್ಟಿನ ಮಾಜೀ ನ್ಯಾಯಾಧೀಶ ಸರ್ ನವರೋಡಿ ವಾಡಿಯಾರನ್ನು ನೇಮಿಸಿದೆ.

ಬ್ಯಾಂಗಾಕ ನ 28 — ಸಯಾಂ ರಾಜ್ಯದಲ್ಲೆಲ್ಲಿ ಬೇಕಾದರಲ್ಲಿ ಬ್ರಿಟಿಷ ವಿಲಿಟರಿ ಆಡಳಿತ ಸ್ಥಾಪಿಸಲೂ ಮತ್ತು ಬಂದೂವರೆ ಮಿಲಿಯ ಟನ್ ಅಕ್ಕಿ ಬಿಟ್ಟು ಪಡೆಯಲು ಒತ್ತಾಯಪಡಿಸಲಾಗುತ್ತಿದೆಯೆಂದು ಒಬ್ಬ ಸಯಾಮಿನ ಮಂತ್ರಿ ಅಮೇರಿಕಾ ಯುನೈಟೆಡ್ ಪ್ರೆಸ್ಸಿಗೆ ತಿಳಿಸಿರುವಂತಾಗಿ ವರದಿಯಾಗಿದೆ.

ಲಂಡನ್, ನ 28 — ಜಾವಾ ಸ್ವಾತಂತ್ರ್ಯಕ್ಕೆ ಸಿದ್ಧವಾಗಿಲ್ಲವೆಂದೂ ಡಚ್ ಸೈನಿಕರು ಬ್ರಿಟಿಷ್‌ರೊಡನೆ ಸೇರಿ ಅಲ್ಲಿ ವಂಗೆ ಆಡಗಿಸಿ ದೇಶವನ್ನು ತಹಬಂದಿಗೆ ತರಲು ಅನುಕೂಲವೆಂದೂ ಡಚ್ ಕಲೋನಿಯಲ್ ಮಂತ್ರಿ ಹೇಳಿದ್ದಾರೆ

ನವದೆಹಲಿ, ನ 28 — ಕಾಗದದ ಬೆಲೆ ಸಿಗದಿಯಲ್ಲಿ ಸ್ವಲ್ಪ ಕಡಿಮೆ ಮಾಡಲಾಗಿದೆ.

ಇಟಲಿಯಲ್ಲಿ ಅಂತರ್ಯುದ್ಧವಾಗುವ ಶಂಪೆಯಿರುವುದರಿಂ ಇಟಲಿಯ ರಿಪಬ್ಲಿಕ್ ಪಾರ್ಟಿಯವರು ರಾಜ ಉಂಬರ್ಟೋರನ್ನು ಇಟಲಿ ಜನರು ತಮಗೆ ರಾಜಾಧಿಪತ್ಯವೇ ಅಥವಾ ಪ್ರಜಾಧಿಪತ್ಯ ಬೇಕೇ ಎಂಬುದು ತೀರ್ಮಾನವಾಗುವವರಿಗೆ ಗಾದಿಯಿಂದ ಇಳಿದಿರಬೇಕೆಂದು ಕೋರಿರುವರು.

ವಾಷಿಂಗ್ಟನ್ ನ 28 — ಪರ್ಷಿಯಾದಿಂದ ಹೊಂವೇಶ ಸೈನ್ಯಗಳು ಹೊರಟುಹೋಗಬೇಕೆಂದು ಅಮೇರಿಕಾದವರು ಬ್ರಿಟನ್ ಮತ್ತು ಸೋವ್ಯೆಟಿಗೆ ಮಾಡಿಕೊಂಡ ಮನವಿಗೆ ಇನ್ನು ಏನೂ ಉತ್ತರಬಂದಿಲ್ಲವೆಂದು ಪ್ರಕಟವಾಗಿದೆ.

ಬೊಂಬಾಯಿ ನ 29 — ಭೂಕಂಪದನಂತರ ಜುಹು ಮತ್ತು ವೆರ್ಸೋವ ಮಧ್ಯ ಸಮುದ್ರ ತೀರದಲ್ಲಿ ಭಾರಿ ಅಲೆಗಳ ಬಡಿತವು ಪರಿಣಾಮವಾಗಿ ಬಹುದೂರದಿಗಿನ ಪಾಲಾದರೆಂದು ತೀರದಲ್ಲಿ ನಿಲ್ಲಿಸಲ್ಪಟ್ಟಿದ್ದ ದೋಣಿಗಳು ಕೊಚ್ಚಿ ಹೋದವೆಂದು ತಿಳಿಯಬಂದಿದೆ.

ಮೈಮೆನ್‌ಸಿಂಗ್ ನ 38— ಭಾರತ ಲೆಜಿಸ್ಲೇಟಿವ್ ಅಸೆಂಬ್ಲಿಗೆ ಸಂತಂತ್ರ ಉಮೇದುವಾರರಾಗಿ ನಂತಿರುವ ಸರ್ ಅಬ್ದುಲ್ ಹಲೀಂ ಗುಜ್ನಾವಿಯವರು ಚುನಾವಣಾ ಪ್ರವಾಸದಲ್ಲಿ ನಂಡಿನಾ ಮತ್ತು ಜಮಾಲ್‌ಪುರದಲ್ಲಿ ಮುಸ್ಲಿಂ ಲೀಗಿನವರು ದುಂಡಾವರ್ತಿ ನಡೆಸಿ ಕಲ್ಲು ಹೊಡೆದರೆಂದು ವೈಸರಾಯಿ ಮತ್ತು ಬಂಗಾಳಾ ಗೌರ್ನರಿಗೆ ತಂತೀ ಮೂಲಕ ತಿಳಿಸಿದ್ದಾರೆ.

ಲಂಡನ್ ನ 28— ಭಾರತದ ಮಾಜಿ ಮಂತ್ರಿ ಎಮೆರಿಯವರ ಪುತ್ರ ಜಾನ್ ಎಮೆರಿಗೆ ರಾಜದ್ರೋಹ ಮೊದಲಾದ ತಕ್ಸೀರುಗಳಿಗಾಗಿ ಮರಣದಂಡನೆ ವಿಧಿಸಲಾಯಿತು. ತನ್ನ ಮೇಲಿನ ಎಲ್ಲಾ ಆಪಾದನೆಗೂ ತಾನು ತಪ್ಪಿತಸ್ಥನೆಂದು ಒಪ್ಪಿಕೊಂಡನು.

ಮದ್ರಾಸ್, ನ 28 — ಮಧುರಾದಲ್ಲಿ ಈಚಿಗೆ ನಡೆದ ಪೋಲಿಸರ ಗೋಲಿಬಾರಿನ ಬಗ್ಗೆ, ಜಿಲ್ಲಾಧಿಕಾರಿಗಳು ಕಳುಹಿಸಿರುವ ವರದಿಯು ಸಮರ್ಪಕವಾಗಿರುವುದರಿಂದ, ಬಹಿರಂಗವಾಗಿಯೇ ಆಗಲಿ, ಅಧಿಕಾರಿಯುತವಾಗಿಯೇ ಆಗಲಿ ತನಿಖೆ ನಡೆಯಿಸುವ ಅನಕಾಶವಿಲ್ಲವೆಂದು ಪ್ರಕಟವಾಗಿದೆ.

ಜಪಾನಿಂದ ಭಾರತಕ್ಕೂ ಪರಿಹಾರ ದ್ರವ್ಯ

ಜಪಾನ್ ಯುದ್ಧದಲ್ಲಿ ತ್ಯಾಗ ಮಾಡಿರುವುದರಲ್ಲಿ ಚೀನಾವು ಮೊದಲನೆಯ ದೇಶವಾದರೆ ಭಾರತವು ಎರಡನೆ ದೇಶವಾಗಿರುವುದರಿಂದ ಜಪಾನಿಂದ ಭಾರತಕ್ಕೂ ಪರಿಹಾರ ದ್ರವ್ಯವನ್ನು ಕೊಡಿಸಬೇಕೆಂದು ಹಿಂದೀ ಸರ್ಕಾರದ ಪ್ರತಿನಿಧಿಗಳಾದ ಸರ್ ಗಿರಿಜಾ ಶಂಕರ ವಾಜಪೇಯಿಯವರು ವಾಷಿಂಗ್ಟನ್ನಲ್ಲಿ ನಡೆಯುತ್ತಿರುವ ಶಾಂತಿ ಸಾಗರ ಶಾಂತಿ ಸಮಿತಿಯಲ್ಲಿ ಭಾರತದ ಹಕ್ಕನ್ನು ಸರ್ಕಾರದ ಪರ ವಾದಿಸಿರುವರು. ಇದಕ್ಕೆ ಎಲ್ಲ ಪ್ರತಿನಿಧಿಗಳು ಒಪ್ಪಿರುವರು.

.....

ತೆರಿಗೆ ವಜಾ

ಹೈದರಾಬಾದು ಆಡಳಿತ ಪ್ರಾಂತ್ಯಗಳಲ್ಲಿ ಆದಾಯದ ತೆರಿಗೆಯನ್ನೂ, ಅಧಿಕ ಲಾಭದ ತೆರಿಗೆಯನ್ನೂ ತೆಗೆದುಹಾಕಿರುವುದಾಗಿ ತಿಳಿದುಬಂದಿದೆ.

.....

ಆಡಳಿತ ವಹಿವಾಟು

ಸಿಕಿಂದ್ರಾಬಾದು ರೆಂಡಿಷ್ಟ್ ಏರ್ಪಾಡುಗಳು ಮುಗಿದಿವೆ. 1-12-45 ರಂ ಹೈದ್ರಾಬಾದು ಸರ್ಕಾರದವರು ಸಿಕಿಂದ್ರಬಾದಿನ ಪರಿಪಾಲನೆಯನ್ನು ವಹಿಸಿಕೊಳ್ಳುವರು.

.....

ಹಾಲಿವುಡ್ ಪರಿಸ್ಥಿತಿ? ಓದಿ

ಕಾಮ್ರೇಡ್ ವರ್ಗೀಯವನಾದ ಲೆಫ್ಟಿನೆಂಟ್ ಆಸ್ಬರ್ನ್‌ರವರು ಇದೇ ತಾರೀಖು 3 ರಲ್ಲಿ ಲಂಡನ್ನಿಂದ ಹಾಲೀವುಡ್ಡಿನ ವಿಷಯದಲ್ಲಿ ಹೀಗೆ ತಿಳಿಸಿರುವರು :---

" ಹಾಲೀವುಡ್ ನಮ್ಮ ಯುವತೀ ಯುವಕರ ಮೇಲೆ ಮಹಾ ದುಷ್ಟ ಪರಿಣಾಮವನ್ನು ಪ್ರಸರಿಸುತ್ತಲಿದೆ. ..... ದಿನದಿನಕ್ಕೆ ಹೆಚ್ಚುತ್ತಿರುವ ಈ ದೋಷವನ್ನು ಪರಿಪಡಿಸಲು ಸರ್ಕಾರದ ವತಿಯಾಗಲಿ ಬೇರೆ ಯಾರಾದರೂ ಆಗಲಿ ಪ್ರಯತ್ನ ಮಾಡಬೇಕಾದ ಸಮಯವು ನಿಮಿರಿ ಹೋಗುತ್ತಿದೆ. " ಸಂ ಸಿ. ಏ. ರಾಮ್ ರವರೂ ಕೂಡ ಇದೇ ತಾ || 2 ರಲ್ಲಿ ತಿರುವೇಂದ್ರದಲ್ಲಿಯು ಅಲಗಪ್ಪಾಹಾಲಿನಲ್ಲಿ ಮಾಡಿದ ಉಪನ್ಯಾಸದಲ್ಲಿಯೂ ಇದೇ ಒಗೆಯಲ್ಲಿ ತಿಳಿಸಿದ್ದಾರೆ.

ವಾರ್ತಾತರಂಗ

ನ್ಯೂರೆಂಬರ್ಗಿನಲ್ಲಿಯು ನಾಜೀ ವಿಚಾರಣೆ ಸಂಬಂಧದಲ್ಲಿ ಹಿಟ್ಲರಿನ ರಹಸ್ಯ ಭಾಷಣಗಳೂ ಕಾಗದಗಳೂ ಹಾಜರಾಗಿ ಮಾಡಲಾಗುವುದೆಂದು ಪ್ರಕಟವಾಗಿದೆ.

ಂ ಂ

ಮ್ಯಾಡ್ರಿಡ್ — ಎರಡು ಸಾವಿರ ಯಹೂದಿ ಮಕ್ಕಳಿಗೆ ಸ್ಪೇನಿನಲ್ಲಿ ಆಶ್ರಯ ಕೊಡಲಾಗುವುದೆಂದು ವಂದಿಯಾಗಿದೆ.

ಂ ಂ

ವಾಷಿಂಗ್ಟನ್ ನ 25 — ಅಮೇರಿಕಾದ ವ್ಯಾಪಾರ ಇಲಾಖೆಯವರು ಯುದ್ಧ ಕಾಲದಲ್ಲಿ 13450000000 ಡಾಲರುಗಳನ್ನು ವ್ಯಯಮಾಡಿದರೆಂದೂ ಈ ಪೈಕಿ 500 ಮಿಲಿಯ ಡಾಲರ್ ಭಾರತದಲ್ಲಿಂದು ವಂದಿಮಾಡಿದ್ದಾರೆ

ಂ ಂ

ಯು.ಗೋಸ್ಲೋವಿಯಾ ರಾಜ ಪೀಟರರು ಪದಚ್ಯುತಿ ಮಾಡಲ್ಪಟ್ಟು ರಿಪಬ್ಲಿಕ್ ರಾಜ್ಯಸ್ಥಾಪನೆಯಾಯಿತು.

ಂ ಂ

ಲಾಹೋರು ನ 25 — ಪಂಜಾಬಿನ ವಿಶ್ವವಿದ್ಯಾನಿಲಯದವರು ತಮ್ಮ ಅಧಿಕಾರಿಗಳು ಚುನಾವಣೆಗೆ ನಿಲ್ಲಬಾರದೆಂದು ಅದಂಲ್ಲಿ ಭಾಗವಹಿಸಬಾರದೆಂದೂ ಮಾಡಿದ ತೀರ್ಮಾನಕ್ಕಾಗಿ ಅಲ್ಲಿ 15 ವರ್ಷಗಳಿಂದ ರಿಜಿಸ್ಟ್ರಾರಾಗಿದ್ದ ದಿ || ಬಾ || ಸಿಂಧ್ರವರು ತಮ್ಮ ಪದವಿಗೆ ರಾಜೀನಾಮೆ ಇತ್ತಿರುವರು ಚುನಾವಣೆಗೆ ನಿಲ್ಲುವದಾಗಿ ತಿಳಿಯಬಂದಿದೆ

ಂ ಂ

ಶ್ರೀ ಶರತಚಂದ್ರಬೋಸರು ಕೇಂದ್ರ ಸಭಾ ಕಾಂಗ್ರೆಸ ಪಕ್ಷದ ನಾಯಕರಾಗಬಹುದೆಂಬ ಸುದ್ದಿ ಹರಡಿದೆ.

ಂ ಂ

ಒರ್‌ಹಾಂಪುರ ನ 24 — ಚುನಾವಣೆ ಸಂಬಂಧದಲ್ಲಿ ಇಲ್ಲಿಗೆ ಡಾ || ಪಟ್ಟಾಭಿ ಸೀತಾರಾಮಯ್ಯನವರು ಒಂದಾಗ ಕೆಲವರು ಕಪ್ಪು ಬಾವುಟ ಪ್ರದರ್ಶನ ನಡೆಸಿದರೆಂದೂ ಆವರ ಮೋಟಾರಿನ ಮೇಲೆ ಕಲ್ಲು ಎಸೆಯಲಾಯಿತೆಂದೂ ತಿಳಿಯಬಂದಿದೆ

ಂ ಂ

ಸಿಡ್ನಿ ನ 28 — ಫೆಸಿಫಿಕ್ ದ್ವೀಪಗಳನ್ನು ಬಿಡುತ್ತಿರುವ ಅಮೇರಿಕನರು ಮಿಲಿಯಗಟ್ಟಿ ಬಾಳಕ್ಕು ಸಾಮಾನುಗಳನ್ನು ಸಮುದ್ರಕ್ಕೆ ಹಾಕುತ್ತಲೂ ಸುಡುತ್ತಲೂ ಇರುವರೆಂದೂ ರಾಬೂಲಿನಿಂದ ಬಂದ ವರದಿಯನ್ನು 'ಸಿಡ್ನಿಸ್' ಪತ್ರಿಕೆ ಬರೆದಿದೆ.

ಸಂಯುಕ್ತ ಸಂಸ್ಥಾನದ ಕಾರ್ಯದರ್ಶಿ ಬೈರೆನ್ಸರು ಪತ್ರಿಕೋದ್ಯೋಗಿಗಳಿಗೆ ಇತ್ತ ಭೇಟಿಯಲ್ಲಿ ತಪ್ಪು ಚೀನಾ ರಾಯಭಾರ ರಾಜೀನಾಮೆ ಇತ್ತಾಗ್ಯೂ ಅಮೆರಿಕದ ನೀತಿಯಲ್ಲಿ ಬದಲಾವಣೆ ಏನೂ ಇಲ್ಲವೆಂದು ತಿಳಿಸಿದರು.

ಂ ಂ

2200 ಹಾಜೀ ಯಾತ್ರಿಕರು ಈ ಮಾಹೆ 5 ಕ್ಕೆ ಭಾರತಕ್ಕೆ ಬರುವರು.

ಂ ಂ

ಭೂಪಾಲ್ ನ 25 — ಉಜ್ಜಯಿನಿಯಿಂದ ಇಲ್ಲಿಗೆ ಬಂದ ಕಾಖ್ಲಾರ್ ಮುಖಂಡ ಅಲ್ಲಾಮ ಮುಷ್ಕೀಯವರಿಗೆ ಭಾಷಣ ಮಾಡದಂತೆ ನಿರ್ಭಂದಾಜ್ಞೆ ಹೊರಟಿದೆ

ಂ ಂ

ಪೆಷಾವರಿನಲ್ಲಿ ಡಾ || ಖಾನ್ ಸಾಹೇಬರು ಭಾಷಣ ಮಾಡುತ್ತಾ ಕಾಂಗ್ರೆಸಿನಿಂದಲೆ ಭಾರತ ಸ್ವಾತಂತ್ರ್ಯ ಬೇಕು ಕಾಣುವುದೆಂದೂ ಕಾಯ್ದೆಅಜಾಂ ಎಂದು ಜಿನ್ನಾರವರನ್ನು ಮುರ್ಖಾದೆ ಮಾಡಕೂಡದೆಂದೂ ಹೇಳಿದರು.

ಂ ಂ

ಭಾರತ. ರೈಲ್ವೇ ಬೋರ್ಡಿನವರು 250000 ಮಂದಿ ಕೆಲಸಗಾರರನ್ನು ತೆಗೆದುಹಾಕಬೇಕೆಂದಿರುವ ಯೋಜನೆಯ ಪ್ರತಿಭಟಿಸಲು ಡಿಸಂಬರ್ 4 ನೇ ತಾರೀಕನ್ನು 'ಪ್ರತಿಭಟನಾ ದಿನ' ವನ್ನಾಗಿ ಆಚರಿಸಬೇಕೆಂದು ಬೊಂಬಾಯಿ ಟ್ರೇಡ್ ಯೂನಿಯನ್ ಸೆಕ್ರಿಟರಿಗಳು ಕೋರಿರುತ್ತಾರೆ.

ಂ ಂ

ಚೀನಾದಲ್ಲಿಯು ಅಮೇರಿಕ ರಾಯಭಾರಿ ಜ || ಕ್ಯಾಟ್ರಿಕ್ ಹರ್ಲಿಯವರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿರುವರು. ಅಮೇರಿಕಾದ ವಿದೇಶಾಂಗ ನೀತಿ ದುರ್ಬಲವೆಂದೂ, 3 ನೇ ಮಹಾಯುದ್ಧ ಅನಿವಾರ್ಯವೆಂದೂ ಅವರು ಹೇಳಿರುವರು.

ಂ ಂ

ಕಲ್ಕತ್ತಾದಲ್ಲಿ 14 ಸಲ ಗುಂಡು ಹಾರಿಸಲಾಯಿತೆಂದೂ ಪರಿಣಾಮವಾಗಿ 33 ಮರಣಗಳಾದವೆಂದೂ ಅದರಲ್ಲೊಬ್ಬರು ಅಮೇರಿಕನ್ ವಿಲ್ಸ್ರಿಯವರೆಂದೂ ಪ್ರಕಟವಾಗಿದೆ.

ಂ ಂ

ಅಮೇರಿಕಾದಲ್ಲಿ ಭಾರತದ ಕೈ ಮಗ್ಗದ ರಗ್ಗುಗಳಿಗೆ ಬಹಳ ಕೇಳಿಕೆಯಿರುವುದು

ಲಂಡನ್ ನ 29— ಪಾರ್ಲಿಮೆಂಟಿನಲ್ಲಿ ಮಿ || ಅಟ್ಲಿಯವರು ಯುದ್ಧದಲ್ಲಿ ಭಾರತದ ಸಾವುನೋವು 179939 ಎಂದಿರುವರು.

ಂ ಂ ಂ ಂ

ಹರ್‌ಫರ್ಡ್ (ಜರ್ಮನಿ) ನ 29— ಯುದ್ಧದಿಂದ ತಾಪತ್ರಯಕ್ಕೆ ಒಳಗಾದವರ ಸಹಾಯಾರ್ಥವಾಗಿ ಯು. ಎನ್. ಆರ್. ಎ. ಪದಾರ್ಥಗಳನು ಕಾಳಸಂತೆಯಲ್ಲಿ ಮಾರಿದ ಆಪಾದನೆಗಾಗಿ ಜರ್ಮನಿಯ ಬ್ರಿಟಿಷ್ ಅಮೇರಿಕನ್ ಮತ್ತು ಫ್ರೆಂಚ್ ಜೋನಿನಲ್ಲಿಯ 600 ಮಂದಿಗೆ ಮೇಲ್ಪಟ್ಟು ವಜಾ ಮತ್ತು ದಸ್ತಗಿರಿ ಮಾಡಲ್ಪಟ್ಟಿದಾರೆ.

ಂ ಂ ಂ ಂ

ಕಲ್ಕತ್ತಾ ನ 29— ಕಳೆದ ವಾರ ಕಲ್ಕತ್ತಾ ಗಲಭೆಯಲ್ಲಿ 14 ಸಾರಿ ಗುಂಡುಹಾರಿಸಲ್ಪಟ್ಟಿತೆಂದು ಪ್ರಕಟವಾಗಿದೆ.

ಂ ಂ ಂ ಂ

ಬಟಾವಿಯಾ ನ 29— ಇಂಡೋನೇಷಿಯಾ ರಿಪಬ್ಲಿಕ್ಕಿನವರು ಜೀವಾಕ್ಕೆ ಡೊಮಿನಿಯನ್ ಸ್ಟೇಟಿನ ಸಾಲದೆಂದೂ, ಸಂಪೂರ್ಣ ಸ್ವಾತಂತ್ರ್ಯವೇ ಬೇಕೆಂದೂ ಹೇಳಿದಾರೆ.

ಂ ಂ ಂ ಂ

ನವದೆಹಲಿ ನ 30— ಐ ಎಕ್. ಎ. ವಿಚಾರಣೆಗೆ ಸುಮಾರು 10 ಮಂದಿ ಒಳಪಡಿಸಲಾಗುವುದೆಂದೂ, 50 ಜನ ಕೂಡ ಇಲ್ಲವೆಂದೂ ಹೇಳಲಾಗಿದೆ.

ಂ ಂ ಂ ಂ

ಫ್ರಾಂಕ್‌ಫರ್ಟ್ ನ 30— ಜನವರಿಯಲ್ಲಿ ನಡೆಯುವ ಜರ್ಮನ್ ಚುನಾವಣೆಯಲ್ಲಿ ನಾಜಿಗಳು ಓಟುಮಾಡಕೂಡದೆಂದು ಅಮೇರಿಕನ್ ಮಿಲಿಟರಿ ಸರಕಾರದವರ ಹೇಳಿಕೆದಾಗಿದೆ.

ಂ ಂ ಂ ಂ

ವಾಷಿಂಗ್ಟನ್ ನ 30— ನಾವು ಅಣು ಬಾಂಬು ತಯಾರಿಸಿ ಶೇಖರಿಸುತ್ತಿರುವದು ಇತರ ದೇಶಗಳಿಗೆ ಬೆದರಿಕೆಯನ್ನುಂಟುಮಾಡುವಂತಾಗಿದೆ : ನಾವು ಹೀಗೇ ನಡೆಗಿ ಭಾರಿ ಅನಾಹುತ ಸಂಭವಿಸದಿರದು ಎಂದು ಅಮೇರಿಕಾದ ಪ್ರೊ || ಯೂರೋ ಅಭಿಪ್ರಾಯಪಟ್ಟಿರುವರು.

ಂ ಂ ಂ ಂ

ನಿರ್ಧರಿಸಲ್ಪಡುವ ಕಾರ್ಯಕ್ರಮದಂತೆ ಪಂ || ಜವಾಹರರು ಬಂಗಾಳ ಪ್ರವಾಸ ಮಾಡುವರು.

ಂ ಂ ಂ ಂ

ಮದ್ರಾಸು ನ 24 — ವಲೆಯಾದಲ್ಲಿ ವಿಚಾರಣೆಗೊಳಪಡಿಸಲಾಗಿರುವ ಭಾರತೀಯ ವಿಚಾರಣೆಯಲ್ಲಿ ಅವರಿಗೆ ಸಹಾಯನುಮಾಡಲು ಏರ್ಪಾಡಾಗುತ್ತಿದೆ.

ಯುವತಿ ಯುವಕರ ವೈಷಮ್ಯ

ಜೊಹಾನ್ಸಬರ್ಗ ನ 27 — ಆರೆಂಜ್ ಫ್ರೀ ಸ್ಟೇಟಿನ ಒಂದು ಸ್ತ್ರೀ ವಿದ್ಯಾಶಾಲೆಯಲ್ಲಿನ ಹುಡುಗಿಯರಿಗೆ ಗಟ್ಟಾದ ಕಾರ್ಯಕಲಾಪಗಳಿಗೆ ಏರ್ಪಡಿಸುತ್ತಿದ್ದ ಇಬ್ಬರು ಯುವಕರು ಶಾಲೆಯ ದೊಡ್ಡ ಹುಡುಗಿಯು ಕೈಗೆ ಸಿಕ್ಕಿಬಿದ್ದರು. ಆ ಹುಡುಗಿಯರು ಇವರಿಂದ ಶಾಲೆಯ ನೀತಿಗೆ ಭಂಗವೆಂದು ಇವರ ಕೈಕಾಲುಗಳಿಗೆ ಹಗ್ಗಬಿಗಿದು ತಲೆಯು ಕೂದಲನ್ನೆಲ್ಲ 'ವಿ' ಮಾರ್ಕಿಗೆ ಕತ್ತರಿಸಿ ಓಡಿಸಿಬಿಟ್ಟರು. ಇದು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಯಾಗಿ ಈ ಅತ್ಯಾಚಾರದಲ್ಲಿ ಭಾಗಿಗಳಾದ 12 ಹುಡುಗಿಯರಿಗೆ ಶಿಕ್ಷೆವಿಧಿಸಲಾಯಿತು.

ಚುನಾವಣೆಯ ತಮಾಷೆಗಳು

ತಂದೆಮಕ್ಕಳು ಪ್ರತಿಸ್ಪರ್ಧಿಗಳು

ಪಾಟ್ನಾ ನ 27— ಚುನಾವಣೆಯಲ್ಲಿ ತಂದೆಮಕ್ಕಳು ಸ್ಪರ್ಧಿಸುತ್ತಿರುವ ತಮಾಷಕರ ವಾರ್ತೆ ಒಂದೆ.

ಬೀಹಾರಿನ ಶಾಸನ ಸಭೆಗೆ ನೃಪಾಲ್ ಮುಖರ್ಜಿಯವರು ಕಾಂಗ್ರೆಸ್ ಪರ ಸ್ಪರ್ಧಿಸುತ್ತಿದ್ದಾರೆ. ಇವರ ಪುತ್ರ ಸುನೀಲ್ ಮುಖರ್ಜಿ ಕಮ್ಯೂನಿಸ್ಟ್ ಪಾರ್ಟಿ ಪರ ಚುನಾವಣೆ ನಿಂತಿದ್ದಾರೆ.

ರಾಮ್ ಚಿತ್ಕಾರ್ ಸಿಂಗರು ಕಾಂಗ್ರೆಸ್ ಸರಪೂ ಅವರ ಮಗ ಚಂದ್ರಶೇಖರರು ಕಮ್ಯೂನಿಸ್ಟ್ ಪಾರ್ಟಿ ದಪಾಗಿಯೂ ಚುನಾವಣೆಗೆ ನಿಂತಿದ್ದಾರೆ.

ಸತ್ಯವಾದಿ
ದಿನಪತ್ರಿಕೆ

ಸ್ವಲ್ಪದಲ್ಲಿ — ತಿಂಗಳಿಗೆ 6 ಆಣೆಗೆ ಸತ್ಯವಾದಿ ಸೋವಿವಾರದ ಸಂಚಿಕೆ ಎಲ್ಲಾ ಏಜಂಟರು ಪೇಪರ್ ಕಾರ್ಯಾಲಯಗಳಲ್ಲಿ ವಿಷಯಗಳಿಗೆ ಒಪ್ಪಿರಿ ಅಂಚೆ ವಿಚ್ಛ ಸೇರಿ ವರ್ಷಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satyavadi Press, Chamaraja Agrahar, Mysore

For all Toilet requisites
Embroidery things
Stationery etc
Visit—

Srivatsa Stores
100 Ft. Road.
MYSORE

For Good Printing
L. N. Press
Sriramp at MYSORE

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಫುಂಡ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುಂಡಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಕ್ಯಾಂಪಸಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Ranjit ❁ From 23–11–45
BANSARI
ಚಾರ್ಲಿ — ಈಶ್ವರಲಾಲ್ — ಪಮೋಮ್ — ದೀಕ್ಷಿತ್ — ಕೇಸರಿ
ಮುಂತಾದವರು ಪಾತ್ರವಹಿಸಿರುವ
❁ ಬನ್ಸರಿ ❁
ಪ್ರತಿ ದಿನ 3 ಆಟಗಳು ....



(ಹಿಂದಿ ಚಿತ್ರ)

AT Opera— From 1–12–45
Return of Fighting Hero
— with —
Herman Brix & Lynn Roberts
Daily 3 Shows
Morning Shows From 30-11-45 — Hangman also Die